# ಸದ್ದು ಮಾಡಲು ಬೇಡವೊ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 92
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 550
3. **Note:** Lyrics given without highlights are as per Ref. 1. The wordings given in Ref. 2 are almost similar as in Ref. 1 and the differences are not considered here.
4. **Note:** Singer has followed these lyrics with few variations.

ರಾಗ: ಕಲ್ಯಾಣಿ ತಾಳ: ಅಟ

ಸದ್ದು ಮಾಡಲು ಬೇಡವೊ, ನಿನ್ನ ಕಾಲಿಗೆ
ಬಿದ್ದು ನಾ ಬೇಡಿಕೊಂಬೆ || ಪ ||

ನಿದ್ದೆಗೆಯ್ಯುವರೆಲ್ಲ ಎದ್ದರೆ ನೀನು ಬಂ-
ದಿದ್ದದ್ದು ಕಂಡರೇನೆಂಬುವರೊ ರಂಗ || ಅಪ ||

ಬಳೆ ಘಲ್ಲುಕೆನ್ನದೇನೊ-ಕೈಯ ಪಿಡಿದು
ಎಳೆಯದಿರೊ ಸುಮ್ಮನೆ
ಮೊಲೆಗಳ ಮೇಲಿನ ಸೆರಗನೆಳೆಯಲು ಕೊ-
ರಳ ಪದಕಂಗಳು ಧ್ವನಿಗೆಯ್ಯುವುವೊ ರಂಗ || ೧ ||

ನಿರುಗೆಯ ಪಿಡಿಯದಿರೊ – ಕಾಂಚಿಯ ದಾಮ
ಕಿರುಗಂಟೆ ಧ್ವನಿಗೆಯ್ಯದೆ?
ಕಿರುದುಟಿಗಳ ನೀನು ಸವಿದು ಚಪ್ಪರಿಸಲು
ತರವಲ್ಲ ಗಂಡ ಮತ್ಸರವ ತಾಳುವನಲ್ಲ || ೨ ||

ನಾಡ ಮಾತುಗಳೇತಕೊ, ಸಂಗೀತವ
ಪಾಡುವ ಸಮಯವೇನೊ

ಗಾಡಿಕಾರ ಶ್ರೀ ಪುರಂದರ ವಿಠಲನೆ
ಪಾಡುಪಂಥಗಳೆ ಒಡಗೂಡುವ ಸಮಯದಿ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಮನೆಗೆ ಬಂದ ಕೃಷ್ಣನನ್ನು ರಹಸ್ಯವಾಗಿ ಕಂಡಳು ಒಬ್ಬ ಗೋವಳಿತಿ. ಗದ್ದಲ ಮಾಡಬೇಡವೆಂದು ಅವನನ್ನು ಬೇಡಿಕೊಳ್ಳುತ್ತಾಳೆ.

**ನಾಡ ಮಾತು** = ಸಲ್ಲದ ಮಾತು

**ಪಾಡುಪಂಥ** = ಈರ್ಷೆಯ ಮಾತು

**ಗಾಡಿಕಾರ** = ಸೊಬಗುಗಾರ, ವಿಲಾಸಿ, ಚೆಲುವ

**ಒಡಗೂಡುವ** = ಒಂದಾಗು, ಸೇರು, ಒಟ್ಟಾಗು

**Classification:** Keerthane
**Ankita:** sri purandara vittala
**Location:** NA
**Category:** Krishna Leele
**Sub-Category:** kai, pati, gopi, Krishna, ranga,
**Pravachana:** NA
**Explanation:** NA